C.R.P.67

| Form No.4 (Civil) Deposition Sheets (R.P.No.57) |
| --- |

**1** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಎಸ್ ಸಿ ಸಂಖ್ಯೆ: **46/2015**

ಪ್ರಾಸಾ. **25** ಚಾಸಾ. **29**

| | | |
| --- | --- | --- |
| ಸಾಕ್ಷಿದಾರರ ಹೆಸರು | : | ವಿಷಕಂಠ |
| ತಂದೆಯ ಹೆಸರು | : | ನಂಜೇಗೌಡ |
| ವಯಸ್ಸು | : | 45 ವರ್ಷಗಳು |
| ಉದ್ಯೋಗ | : | ವ್ಯವಸಾಯ |
| ವಾಸ | : | ಬೊಪ್ಪ ಸಮುದ್ರ, ಮದ್ದೂರು ತಾಲ್ಲೂಕು. |

ಪ್ರಮಾಣ ವಚನ ಬೋಧಿಸಿದ ದಿನಾಂಕ: **04.03.2026**

ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನಾನು 2012 ರಲ್ಲಿ ಟಾಟಾ ಮ್ಯಾಜಿಕ್ ವಾಹನವನ್ನು ಖರೀದಿಸಿದ್ದೆನು. ಅದರ ನೋಂದಣಿ ಸಂಖ್ಯೆ ಬಗ್ಗೆ ಉತ್ತರಿಸಲಾರೆ. ಸದರಿ ವಾಹನವನ್ನು ಬಾಡಿಗೆಗೆ ಅಂದರೆ ಪ್ರಯಾಣಿಕರನ್ನು ಬಾಡಿಗೆಗೆ ಕರೆದುಕೊಂಡು ಹೋಗುವ ಸಲುವಾಗಿ ಉಪಯೋಗಿಸುತ್ತಿದ್ದೆ. ಸದರಿ ವಾಹನವನ್ನು ನಾನು ಟಾಟಾ ಫೈನಾನ್ಸ್ ನವರಿಂದ ಸಾಲ ಮಾಡಿ ಖರೀದಿಸಿದ್ದೆನು. ಸದರಿ ವಾಹನವನ್ನು ಒಂದು ವರ್ಷಗಳ ಕಾಲ ಅನುಭವಿಸಿ ಅದರ ಸಾಲ ತೀರುವಳಿ ಮಾಡದಿದ್ದ ಕಾರಣ ಅದನ್ನು ಮೇಲೆ ಹೇಳಿದ ಟಾಟಾ ಫೈನಾನ್ಸ್ ಖಾಸಗಿ ಸಂಸ್ಥೆಯವರು ತಮ್ಮ ವಶಕ್ಕೆ ಪಡೆದರು. ಸದರಿ ವಾಹನದ ಆಗು ಹೋಗುಗಳ ಬಗ್ಗೆ ಆ ವಾಹನವನ್ನು ಮೇಲೆ ಹೇಳಿದ ಫೈನಾನ್ಸ್ ಸಂಸ್ಥೆಯವರು ವಶಕ್ಕೆ ಪಡೆದ ನಂತರ ಏನಾಯಿತು ನನಗೆ ಗೊತ್ತಿಲ್ಲ. ಸದರಿ ವಾಹನ ಯಾವುದಾದರೂ ಕೃತ್ಯಕ್ಕೆ ಬಳಸಲ್ಪಟ್ಟಿತೋ ಇಲ್ಲವೋ ನನಗೆ

ಗೊತ್ತಿಲ್ಲ. ಪೋಲೀಸರು ನನ್ನನ್ನು ಯಾವುದೇ ರೀತಿಯಲ್ಲಿ ವಿಚಾರಣೆಗೆ ಒಳಪಡಿಸಿ ತತ್ಸಂಬಂಧ ಹೇಳಿಕೆಯನ್ನು ನನ್ನಿಂದ ಪಡೆದಿಲ್ಲ.

**(**ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಕೋರಿದ್ದು**,** ಕೋರಿಕೆ ಸಮರ್ಪಕವಾಗಿದ್ದು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲಾಗಿದೆ**.)**

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>

2. ನೀವು ಪ್ರಕರಣದ ಆರೋಪಿತರ ಪೈಕಿ ಒಪ್ಪರಾದ 6 ನೇ ಆರೋಪಿ ರಾಜ ಇವರೊಂದಿಗೆ ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದ ಮತ್ತು ನೀವು ಖರೀದಿಸಿದ್ದ ಟಾಟಾ ಮ್ಯಾಜಿಕ್ ವಾಹನ ಕುರಿತಂತೆ ಸದರಿ 6 ನೇ ಆರೋಪಿಯೊಂದಿಗೆ 5,36,100/- ರೂ ಗಳಿಗೆ ಮಾರಾಟ ಮಾಡಲು ಒಪ್ಪಿ ರೂ.1,20,000/- ಗಳನ್ನು 6 ನೇ ಆರೋಪಿಯಿಂದ ಪಡೆದು ಮೇಲೆ ಹೇಳಿದ ಫೈನಾನ್ಸ್ ಸಂಸ್ಥೆಗೆ ಕಟ್ಟುವುದಾಗಿ ಮತ್ತು ಉಳಿಕೆ ಸಾಲದ ಕಂತುಗಳನ್ನು 6 ನೇ ಆರೋಪಿಯೇ ಮೇಲೆ ಹೇಳಿದ ಫೈನಾನ್ಸ್ ಸಂಸ್ಥೆಗೆ ಕಟ್ಟಿಕೊಂಡು ಹೋಗುವುದಾಗಿ ಕರಾರು ಮಾಡಿಕೊಂಡಿದ್ದನು ಎಂದರೆ ಸರಿಯಲ್ಲ. ಈ ಬಗ್ಗೆ ಈಗ ನಿಮಗೆ ಓದಿ ಹೇಳಿದಂತೆ ಅಂದರೆ "ಈಗ ನನಗೆ ಪರಿಚಯವಿರುವ ............ ಮತ್ತೆ ನೋಡಿದರೆ ಗುರುತಿಸುತ್ತೇನೆ" ಎಂದು ನೀವು ಹೇಳಿಕೆಯನ್ನು ತನಿಖಾಧಿಕಾರಿಗಳಿಗೆ ನೀಡಿರುವಿರಿ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯ ಭಾಗವನ್ನು ಈಗ ನಿ**.**ಪಿ**-54** ಎಂದು ಗುರುತಿಸಲಾಯಿತು.

3. ನೀವು ನಿ.ಪಿ-54 ರಂತೆ ಹೇಳಿಕೆ ನೀಡಿದ್ದರೂ ಮತ್ತು ನೀವು 6 ನೇ ಆರೋೀಯ ಬಗ್ಗೆ ನಿಮಗೆ ಮಾಹಿತಿ ಇದ್ದರೂ ಸಹ ನೀವು ಅಸತ್ಯ ನುಡಿಯುತ್ತಿರುವಿರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ ಆರೋಪಿತರ ಪರ ವಕೀಲರುಗಳಿಂದಃ</u>

ಆರೋಪಿಗಳ ಪರ ವಕೀಲರುಗಳು ಹಾಜರಿದ್ದು ತಮ್ಮದು ಪಾಟೀ ಸವಾಲು ಏನೂ ಇಲ್ಲ ಎಂದು ಹೇಳುತ್ತಿದ್ದಾರೆ, ಆದ್ದರಿಂದ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

<u>ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ **165** ರ ಅಡಿಯಲ್ಲಿ ನ್ಯಾಯಾಲಯದ ವತಿಯಿಂದ ಸಾಕ್ಷ್ಯ ವಿಚಾರಣೆಃ</u>

ಪ್ರಶ್ನೆಃ ನೀವು ಮುಖ್ಯ ವಿಚಾರಣೆಯಲ್ಲಿ ನುಡಿದ ಟಾಟಾ ಮ್ಯಾಜಿಕ್ ವಾಹನವನ್ನು ಎಂದು ಖರೀದಿಸಿದಿರಿ?

ಉತ್ತರಃ 2012 ರಲ್ಲಿ ಖರೀದಿಸಿದ್ದೆ.

ಪ್ರಶ್ನೆಃ ಸದರಿ ವಾಹನ ನಿಮ್ಮ ಸ್ವಾಧೀನದಲ್ಲಿ ಎಲ್ಲಿಯ ತನಕ ಇತ್ತು?

ಉತ್ತರಃ 2012 ರ ಅಕ್ಟೋಬರಿನ ವರೆಗೂ ಅದು ನನ್ನ ಸ್ವಾಧೀನದಲ್ಲಿತ್ತು.

ಪ್ರಶ್ನೆಃ ನಿಮಗೆ ನ್ಯಾಯಾಲಯದ ಮುಂದೆ ಇರುವ 6 ನೇ ಆರೋಪಿ ಗೊತ್ತೆ?

ಉತ್ತರಃ ಆತ ನನಗೆ ಗೊತ್ತಿಲ್ಲ.

ಪ್ರಶ್ನೆಃ ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಖಾಸಗಿ ಫೈನಾನ್ಸ್ ಸಂಸ್ಥೆಯವರು ನೀವು ಖರೀದಿಸಿದ್ದ ಟಾಟಾ ಮ್ಯಾಜಿಕ್ ವಾಹನವನ್ನು ನೀವು ಸಾಲದ ಕಂತುಗಳನ್ನು ಕಟ್ಟದೇ ಇದ್ದ ಕಾರಣ ಅವರ ವಶಕ್ಕೆ ಪಡೆದರೆಂದು ನುಡಿದಿರಿ. ಸದರಿ ವಾಹನವನ್ನು ಟಾಟಾ ಫೈನಾನ್ಸ್ ಸಂಸ್ಥೆಯವರು ನಿಮ್ಮಿಂದ ಎಂದು? ಮತ್ತು ಎಲ್ಲಿ ಅವರ ವಶಕ್ಕೆ ಪಡೆದರು?

ಉತ್ತರಃ ಬೊಪ್ಪಸಮುದ್ರ ಗ್ರಾಮಕ್ಕೆ ಬಂದು ಸದರಿ ವಾಹನವನ್ನು ಫೈನಾನ್ಸ್ ಸಂಸ್ಥೆಯವರು ತಮ್ಮ ವಶಕ್ಕೆ ಪಡೆದಿರುತ್ತಾರೆ. ಅವರು ವಶಕ್ಕೆ ಪಡೆದ ದಿನಾಂಕದ ಬಗ್ಗೆ ನಾನು ನೆನಪಿನ ಅಭಾವದಿಂದ ಉತ್ತರಿಸಲಾರೆ.

ಪ್ರಶ್ನೆಃ ವಾಹನವನ್ನು ಫೈನಾನ್ಸ್ ಸಂಸ್ಥೆಯವರು ವಶಕ್ಕೆ ಪಡೆದಾಗ ನೀವು ಸದರಿ ಗ್ರಾಮದಲ್ಲಿ ಇದ್ದಿರಾ?

ಉತ್ತರಃ ಹೌದು ಇದ್ದೆ.

ಪ್ರಶ್ನೆಃ ಸಂಸ್ಥೆಯವರು ವಾಹನವನ್ನು ವಶಕ್ಕೆ ಪಡೆದಾಗ ಸಮಯ ಎಷ್ಟಾಗಿತ್ತು?

ಉತ್ತರಃ ಆಗ ಸಮಯ ಮಧ್ಯಾಹ್ನ 3-00 ಗಂಟೆ ಆಗಿತ್ತು.

ಪ್ರಶ್ನೆಃ ವಾಹನಕ್ಕೆ ಸಂಬಂಧಪಟ್ಟ ಆರ್ ಸಿ ಪುಸ್ತಕ ದಾಖಲೆ ಮತ್ತು ವಿಮಾ ದಾಖಲೆ ಇವುಗಳು ಯಾರ ವಶದಲ್ಲಿದ್ದವು?

ಉತ್ತರಃ ಅವುಗಳು ಫೈನಾನ್ಸ್ ಸಂಸ್ಥೆಯ ವಶದಲ್ಲೇ ಇದ್ದವು.

**(**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು**)**

ಓ. ಹೇ. ಕೇ. ಸ. ಒ.

(ಸಿದ್ದಲಿಂಗ ಪ್ರಭು)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.